# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 746(944) |
| ಸದಸ್ಯರ ಹೆಸರು | : | ಶ್ರೀ ಚಿದಾನಂದ ಎಂ.ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 24.08.2026 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಆದೇಶಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30/3/2002 ಹಿಂದುಳಿದವರ್ಗದ ಪ್ರವರ್ಗ-1 ರ ಪಟ್ಟಿಯಕ್ರಮ ಸಂಖ್ಯೆ:86 (ಡಬ್ಲ್ಯೂ) ನಂತರದ ಕ್ರಮ ಸಂಖ್ಯೆ:86 (ಎಕ್ಸ್) ರಲ್ಲಿ ಕಾಡುಗೊಲ್ಲ ಎಂಬ ಪ್ರರ್ಯಾಯ ಪದವನ್ನು ಸರ್ಕಾರಿ ಆದೇಶ ಸಂಖ್ಯೆ: ಹಿಂವಕ 328 ಬಿಸಿಎ 2017 ದಿನಾಂಕ:29/1/2018 ರಂತೆ ಸೇರ್ಪಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಆದೇಶ ಸಂಖ್ಯೆ: ಹಿಂವಕ 328 ಬಿಸಿಎ 2017 ದಿನಾಂಕ:29/1/2018ರಲ್ಲಿ ಕಾಡುಗೊಲ್ಲ ಹಾಗೂ ಹಟ್ಟಿಗೊಲ್ಲ ಸಮುದಾಯವನ್ನು ಶಿಕ್ಷಣ ಮತ್ತು ಉದ್ಯೋಗದ ಮೀಸಲಾತಿಗಾಗಿ ಪ್ರವರ್ಗ-1 ರಡಿ ಸೇರ್ಪಡೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ. |
| ಆ) | ಕಾಡುಗೊಲ್ಲ ಸಮುದಾಯ ಹಿಂದುಳಿದ ವರ್ಗದ ಜಾತಿಪಟ್ಟಿಗೆ ಸೇರಿದ ದಿನಾಂಕ:29/1/2018 ರ ಮೊದಲು 1966 ರಿಂದ ಅಲೆಮಾರಿ-ಅರೆಅಲೆಮಾರಿ ಪಟ್ಟಿಯಲ್ಲಿದ್ದು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮೀಸಲಾತಿ ಹಿಂದುಳಿದ ವರ್ಗ "ಅ" ಕೇಂದ್ರ ಸರ್ಕಾರ ಒಬಿಸಿ ಮೀಸಲಾತಿ ಸೌಲಭ್ಯಗಳನ್ನು ಪಡೆಯುತ್ತಿದ್ದು ಈಗ ಇವುಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಆದೇಶ ಸಂಖ್ಯೆ: ಪಿಹೆಚ್‌ಎಸ್ 262 ಎಸ್‌ಇ ಡಬ್ಲ್ಯೂ 65 ದಿನಾಂಕ:01-02-1966 ರ ಪ್ರಕಾರ 46 ಅಲೆಮಾರಿ-ಅರೆಅಲೆಮಾರಿ ಬುಡಕಟ್ಟು ಸಮುದಾಯಗಳೆಂದು ಗುರುತಿಸಲಾಗಿರುತ್ತದೆ. ಈ ಪಟ್ಟಿಯಲ್ಲಿ ಕಾಡುಗೊಲ್ಲ ಸಮುದಾಯವು ಸೇರಿರುವುದಿಲ್ಲ.<br>ಸರ್ಕಾರಿ ಆದೇಶ ಸಂಖ್ಯೆ: RDP 5 ZPS 95 (i) zps dated:13-01-1995 ರಂತೆ ಸ್ಥಳೀಯ ಸಂಸ್ಥೆಗಳ ಚುಣಾವಣೆಗೆ ಪಟ್ಟಿ ಮಾಡಲಾಗಿರುವ ಸಮುದಾಯಗಳಲ್ಲಿ ಹಾಗೂ ಕ್ರೇಂದ್ರ ಸರ್ಕಾರದ ಒಬಿಸಿ ಪಟ್ಟಿಯಲ್ಲಿ ಕಾಡುಗೊಲ್ಲ ಸಮುದಾಯವನ್ನು ಸೇರ್ಪಡೆ ಮಾಡಲಾಗಿರುವುದಿಲ್ಲ. |
| ಇ) | ಸರ್ಕಾರಿ ದಾಖಲೆಗಳಲ್ಲಿ ಹಿಂದುಳಿದ ವರ್ಗದ ಅಲೆಮಾರಿ ಮತ್ತು ಅರೆಅಲೆಮಾರಿ ಸಮುದಾಯದ ಜನಸಂಖ್ಯೆಯಲ್ಲಿ ಕಾಡುಗೊಲ್ಲ ಸಮುದಾಯವೇ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ 80% ರಷ್ಟು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ರಾಜ್ಯದ ಎಲ್ಲಾ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಬಗ್ಗೆ ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ. ಸದರಿ ಸಮೀಕ್ಷಾ ವರದಿ-2025ನ್ನು ದಿನಾಂಕ:27.05.2026 ರಂದು ಸ್ವೀಕೃತವಾಗಿರುತ್ತದೆ. ಮಾನ್ಯ ಉಚ್ಛ ನ್ಯಾಯಾಲಯದ ಆದೇಶದನ್ವಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ- 2025ರ ದತ್ತಾಂಶಗಳ ಗೌಪ್ಯತೆಯನ್ನು ಕಾಪಾಡಬೇಕಾಗಿದ್ದು ಅದರಂತೆ ಕ್ರಮ ವಹಿಸಲಾಗಿದೆ. |

| | | |
|---|---|---|
| ಈ) | ಅಲೆಮಾರಿ-ಅರೆಅಲೆಮಾರಿ ಸೌಲಭ್ಯ ಸ್ಥಳೀಯ ಸಂಸ್ಥೆ ಚುನಾವಣೆ ಹಿಂದುಳಿದ ವರ್ಗ ಅ ಮೀಸಲಾತಿ ಕೇಂದ್ರ ಸರ್ಕಾರದ ಒ.ಬಿ.ಸಿ ಮೀಸಲಾತಿ ಇವುಗಳನ್ನು ಕಾಡುಗೊಲ್ಲ ಸಮುದಾಯಕ್ಕೆ ಜಾತಿಪಟ್ಟಿಗೆ ಸೇರುವ ಮೊದಲಿನಂತೆ ಮುಂದುವರಿಸಲು ಸರ್ಕಾರಕ್ಕೆ ಇರುವ ಅಡ್ಡಿಗಳೇನು: | ಅನ್ವಯಿಸುವುದಿಲ್ಲ. |
| ಉ | ಈ ಮೇಲಿನ ಎಲ್ಲಾ ಸೌಲಭ್ಯ ಮತ್ತು ರಿಯಾಯಿತಿಗಳನ್ನು ಮೊದಲಿನಂತೆಯೇ ಮುಂದುವರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಅನ್ವಯಿಸುವುದಿಲ್ಲ. |

ಸಂಖ್ಯೆ: ಹಿಂವಕ 276 ಬಿಸಿಎ 2026

(ಶಿವರಾಜ ಎಸ್. ತಂಗಡಗಿ)
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು